## ಉದ್ದೀಪನ ಮದ್ದಿನ ಪೆಟ್ಟು!

ಉದ್ದೀಪನ ಮದ್ದು ಸೇವನೆಯಿಂದಾಗಿ ಭಾರತದ ಮೂವರು ಕ್ರೀಡಾಪಟುಗಳು ಕಣಕ್ಕಿಳಿಯಲಿಲ್ಲ.

ರಿಯೊ ತೆರಳುವ ಮುನ್ನವೇ ಸಿಕ್ಕಿಬಿದ್ದ ಶಾಟ್‌ಪಟ್ ಅಥ್ಲೀಟ್ ಇಂದರ್‌ಜೀತ್ ಸಿಂಗ್, 200 ಮೀಟರ್ಸ್ ಓಟದ ಸ್ಪರ್ಧಿ ಧರ್ಮವೀರ್ ಸಿಂಗ್ ಮತ್ತು ಸ್ಪರ್ಧೆಗೆ ಒಂದು ದಿನ ಮೊದಲು ನಿಷೇಧಕ್ಕೊಳಗಾದ ಕುಸ್ತಿಪಟು ನರಸಿಂಗ್ ಯಾದವ್ ಆ ಕ್ರೀಡಾಪಟುಗಳು. ಅದರಲ್ಲಿ ಇಂದರ್‌ಜೀತ್ ಮತ್ತು ಧರ್ಮವೀರ್ ಅವರು ರಿಯೊಗೆ ತೆರಳಲಿಲ್ಲ. ಆದರೆ, ಫ್ರೀಸ್ಟೈಲ್ ಕುಸ್ತಿಪಟು ನರಸಿಂಗ್ ಯಾದವ್ ಅವರದ್ದು ಇನ್ನೊಂದು ಬಗೆಯ ದುರಂತ.

ಯಾದವ್ 74 ಕೆಜಿ ವಿಭಾಗದಲ್ಲಿ ಪದಕ ಗೆಲ್ಲುವ ಭರವಸೆಯ ಪೈಲ್ವಾನರಾಗಿದ್ದರು. ಜೂನ್ ಕೊನೆಯ ವಾರದಲ್ಲಿ ಅವರು ಮದ್ದು ಸೇವನೆ ಆರೋಪದಲ್ಲಿ ಸಿಲುಕಿದ್ದರು. ಎರಡು ವಾರಗಳ ವಿಚಾರಣೆಯ ನಂತರ ನಾಡಾ ಅವರನ್ನು ನಿರ್ದೋಷಿ ಎಂದು ಘೋಷಿಸಿತ್ತು. ವಿಶ್ವ ಕುಸ್ತಿ ಸಂಸ್ಥೆಯೂ ಅವರಿಗೆ ಹಸಿರು ನಿಶಾನೆ ತೋರಿತ್ತು. ಆಗಸ್ಟ್ 19ರಂದು ಅವರು ತಮ್ಮ ವಿಭಾಗದಲ್ಲಿ ಸ್ಪರ್ಧೆಯಲ್ಲಿ ಆಡಲು ಸಿದ್ಧರಾಗಿದ್ದರು. ಆದರೆ ಅದರ ಮುನ್ನಾ ದಿನ (ಆ. 18) ನಾಡಾ ತೀರ್ಪನ್ನು ಸಾರಾಸಗಟಾಗಿ ತಳ್ಳಿಹಾಕಿದ ಕ್ರೀಡಾ ನ್ಯಾಯಾಲಯವು ನಾಲ್ಕು ವರ್ಷದ ನಿಷೇಧ ಹಾಕಿತು. ಇದರಿಂದಾಗಿ ಒಟ್ಟು ಮೂರು ವಿಭಾಗಗಳಲ್ಲಿ ಭಾರತದ ಸ್ಪರ್ಧೆಯೇ ಇಲ್ಲದಂತಾಯಿತು.

### ರಿಯೊ ಒಲಿಂಪಿಕ್ಸ್ ಪಾಠವಾಗಬಲ್ಲದೇ?

'ಪ್ರತಿ ಕ್ಷಣವೂ ಮಹತ್ವದ್ದು (ಎವರಿ ಸೆಕೆಂಡ್ ಕೌಂಟ್ಸ್)' ಎಂದು ಸೈಕ್ಲಿಸ್ಟ್ ಲ್ಯಾನ್ಸ್ ಆರ್ಮ್‌ಸ್ಟ್ರಾಂಗ್ ಹೇಳುತ್ತಾರೆ. ಕ್ರೀಡೆಯಲ್ಲಿ ಇದು ಪ್ರಮುಖ ಅಂಶ. ಆದರೆ ಈ ಮಾತಿನ ಅರ್ಥ ಮತ್ತು ರಿಯೊ ಒಲಿಂಪಿಕ್ಸ್ ಏಳು–ಬೀಳುಗಳಿಂದ ನಮ್ಮ ವ್ಯವಸ್ಥೆ ಪಾಠ ಕಲಿಯುವುದೇ?

'ಕ್ರೀಡಾಪಟುಗಳಿಗಾಗಿ ನಾವು ಸಾಕಷ್ಟು ಹಣ ವ್ಯಯಿಸಿದ್ದೇವೆ' ಎಂದು ಸರ್ಕಾರ ಮತ್ತು ಸಂಸ್ಥೆಗಳು ಬೊಬ್ಬೆ ಹೊಡೆಯುತ್ತವೆ. ಆದರೆ ಒಂದಿಷ್ಟು ಹಣ ಚೆಲ್ಲಿದರೆ ಸಾಕಾಗುವುದಿಲ್ಲ ಎಂಬುದನ್ನು ಅರಿಯುವ ಕಾಲ ಈಗ ಬಂದಿದೆ.

ಅಮೆರಿಕ, ಚೀನಾ, ಜಪಾನ್, ಫ್ರಾನ್ಸ್, ಜರ್ಮನಿ ದೇಶಗಳಲ್ಲಿ ಇವತ್ತು ಕ್ರೀಡಾಪಟುಗಳು ಮೈದಾನದಲ್ಲಿ ಸಿದ್ಧರಾಗುತ್ತಿಲ್ಲ. ಪ್ರಯೋಗಾಲಯದಲ್ಲಿ ಸಿದ್ಧರಾಗುತ್ತಿದ್ದಾರೆ. ಆ ದೇಶಗಳಲ್ಲಿ ದೈಹಿಕ ಶಿಕ್ಷಣ, ಆರೋಗ್ಯ ಮತ್ತು ಕ್ರೀಡೆಗೆ ಹಣವನ್ನು ವಿನಿಯೋಗಿಸಲಾಗುತ್ತದೆ. ಇಲ್ಲಿಯ ತರಹ 'ಖರ್ಚು' ಮಾಡುವುದಿಲ್ಲ. ಆ ದೇಶಗಳಲ್ಲಿಯೂ ರಾಜಕೀಯ, ಕೆಸರೆರಚಾಟ, ಭ್ರಷ್ಟಾಚಾರಗಳು ಇಲ್ಲವೆಂದಲ್ಲ. ಆದರೆ, ದೇಶದ ಪ್ರತಿಷ್ಠೆಯ ವಿಷಯ ಬಂದಾಗ ವ್ಯವಸ್ಥೆ ಕ್ರೀಡಾಪಟುಗಳ ಪರವಾಗಿ ನಿಲ್ಲುತ್ತದೆ.

ನಮ್ಮಲ್ಲಿರುವ ದೀಪಾ ಕರ್ಮಾಕರ್ ಅವರಂತಹ ಪ್ರತಿಭೆಗಳಿಗೆ ಆಧುನಿಕ ರೀತಿಯ ಸಲಕರಣೆಗಳು ಸಿಗಬೇಕು. ವಿಶ್ವೇಶ್ವರ್ ನಂದಿ, ಪುಲ್ಲೇಲ ಗೋಪಿಚಂದ್ ಅವರಂತಹ ತರಬೇತುದಾರರಿಗೆ ಹೆಚ್ಚು ಅವಕಾಶ, ಪ್ರೋತ್ಸಾಹ ಸಿಗಬೇಕು.

ಎಲ್ಲಕ್ಕಿಂತ ಮಿಗಿಲಾಗಿ ಹಲವು ಕ್ರೀಡಾ ಸಂಸ್ಥೆಗಳಲ್ಲಿರುವ ಒಳಜಗಳಗಳು, ಭ್ರಷ್ಟಾಚಾರ, ರಾಜಕೀಯ ಹಸ್ತಕ್ಷೇಪ, ಸ್ವಜನ ಪಕ್ಷಪಾತ, ಅಧಿಕಾರ ದುರ್ಬಳಕೆಗಳು ನಿಲ್ಲಬೇಕು. ಪ್ರತಿಭಾವಂತರು ಅವಕಾಶ ಗಿಟ್ಟಿಸಬೇಕು. ಅದಕ್ಕಾಗಿ ಪಾರದರ್ಶಕ ವ್ಯವಸ್ಥೆ ಬರಬೇಕು.

'ನೀವು ಕ್ರಿಕೆಟ್‌ಗೆ ಹೆಚ್ಚು ಗಮನ ಕೊಟ್ಟರಿ. ಅಲ್ಲಿ ಸ್ಪಾಟ್ ಫಿಕ್ಸಿಂಗ್, ಮ್ಯಾಚ್ ಫಿಕ್ಸಿಂಗ್‌ಗಳು ಸಿಕ್ಕವು. ನೀವು ಗಮನವನ್ನೇ ನೀಡದ ಸಾಕ್ಷಿ ಮಲಿಕ್ ಕಂಚಿನ ಪದಕ ತಂದುಕೊಟ್ಟಳು' ಎಂದು ಕರ್ಣಂ ಮಲ್ಲೇಶ್ವರಿ ಅವರು ಹೇಳಿರುವ ಮಾತು ನಿಜ. ಆದರೆ,

ಕುಸ್ತಿ ಪಟು ಯೋಗೀಶ್ವರ್ ದತ್ ಚಿತ್ರ: 'ಸುಧಾ' ಸಂಗ್ರಹ

